International Journal of Kannada Research
www.kannadajournal.com

ISSN: 2454–5813
IJKR 2017; 3(3): 105-106
© 2017 IJKR
www.kannadajournal.com
Received: 23-05-2017
Accepted: 25-06-2017

**ಡಾ.ಬಾಳಪ್ಪ.ಎ.ಬಿ.**
ಕನ್ನಡ ಸಹ ಪ್ರಾಧ್ಯಾಪಕರು
ಬಿ.ಎಂ.ಎಸ್.ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹುಳಿಯಾರು, ತುಮಕೂರು ಜಿಲ್ಲೆ

**Correspondence**
**ಡಾ.ಬಾಳಪ್ಪ.ಎ.ಬಿ.**
ಕನ್ನಡ ಸಹ ಪ್ರಾಧ್ಯಾಪಕರು
ಬಿ.ಎಂ.ಎಸ್.ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹುಳಿಯಾರು, ತುಮಕೂರು ಜಿಲ್ಲೆ.

# ಸರ್ವಜ್ಞನ ವಚನಗಳಲ್ಲಿ ಹೆಣ್ಣು

**ಡಾ.ಬಾಳಪ್ಪ.ಎ.ಬಿ.**

**ಸಂಕ್ಷಿಪ್ತ ಸೂಚಿ**
ತೆಲುಗಿನ ವೇಮನ, ತಮಿಳಿನ ತಿರುವಳ್ಳುವರ್ ಇವರಿಗೆ ಸರಿಸಮನಾಗಿ ಉದಯಿಸಿದ 'ಸರ್ವರೊಳಗೊಂದೊಂದು ನುಡಿಗಲಿತು ವಿದ್ಯೆಯ ಪರ್ವತವೇ ಆದ ಸರ್ವಜ್ಞ'ನು ಕನ್ನಡ ಸಾರಸ್ವತ ಲೋಕದಲ್ಲಿ 'ತ್ರಿಪದಿಯ ಬ್ರಹ್ಮ'ನೆಂದೇ ಚಿರಪರಿಚಿತ. ಈತನ ವಚನಗಳು ಸಮಾಜಕ್ಕೆ ಉಣಬಡಿಸಿದ ನೀತಿಯುತ ಸಂದೇಶಗಳು ಮತ್ತು ಮೂರು ಸಾಲಿನ ಪದ್ಯಗಳಲ್ಲಿ ಮೂರು ಲೋಕಗಳನ್ನೇ ಕಾಣಿಸುವ ಸತ್ಯ ಮತ್ತು ಸತ್ವವುಳ್ಳವುಗಳಾಗಿವೆ. ನೇರನುಡಿ, ನಿಷ್ಠುರತೆಗಳೇ ಮೈವೆತ್ತಂತೆ ಕಾಣುವ ಈತನ ವಚನಗಳಲ್ಲಿ 'ಅಧರಕ್ಕೆ ಕಹಿಯಾದರೂ ಉದರಕ್ಕೆ ಸಿಹಿ' ಎಂಬಂತೆ ಸಾಮಾಜಿಕ ರೋಗಗಳಿಗೆ ಸಿದ್ಧೌಷಧಿಗಳೇ ಆಗಿರುವುದು ವಿಶೇಷ. ಒಳಿತು ಕೆಡುಕಿನ ಆಂತರಿಕ ಮಂಥನದಿಂದ ಹಚ್ಚಿದ ದಿವ್ಯಜ್ಯೋತಿಗಳೇ ಸರ್ವಜ್ಞನ ವಚನಗಳಾಗಿವೆ.

**ಪೀಠಿಕೆ**
ಜಗತ್ತಿನಲ್ಲಿ ಹೆಣ್ಣು ಕುಟುಂಬದ, ಸಾಂಸಾರಿಕ ಬಂಧನದ ಕಣ್ಣು. ತನ್ನ ತಾನರಿತು ನಡೆಯುವ ಸತಿಯಿದ್ದರೆ ಆ ಮನೆಯೇ ನಂದಗೋಕುಲ. ಪತಿಯೇ ಪರದೈವವೆಂದು ನಂಬಿ ನಡೆದ ಹೆಣ್ಣುಗಳ ಬದುಕು ಭಾರತೀಯ ಸಂಸ್ಕೃತಿಯಲ್ಲಿ ಪಾವನವಾಗಿರುವುದಕ್ಕೆ ಸಾಕ್ಷಿಯೂ ಲಭ್ಯ, ಕುಟುಂಬಕ್ಕೆ ಭೂಷಣಪ್ರಾಯಳಾದ ಹೆಣ್ಣನ್ನು ಕುರಿತು ಸರ್ವಜ್ಞ ತನ್ನ ವಚನಗಳಲ್ಲಿ ಹೆಣ್ಣಿಂದಲೇ ಸಕಲವೂ ಎಂಬಂತೆ ವರ್ಣಿಸಿದ್ದಾನೆ.

ಹೆಣ್ಣಿಂದಲೆ ಇಹವು ಹೆಣ್ಣಿಂದಲೆ ಪರವು
ಹೆಣ್ಣಿಂದಲೆ ಸಕಲ ಸಂಪದವು ಹೆಣ್ಣೊಲ್ಲ
ದಣ್ಣಗಳು ಯಾರು ಸರ್ವಜ್ಞ ॥

ಹೆಣ್ಣು ಇಹಲೋಕದ ಸೃಷ್ಟಿಗೆ ಕಾರಣಕರ್ತಳಾಗಿದ್ದಾಳೆ. ಪರಲೋಕದ ಸೌಖ್ಯಕ್ಕೂ ಪ್ರೇರಕ ಮಾತ್ರವಲ್ಲ ಪೋಷಕಳೂ ಹೌದು. ಅವಳಿಂದ ಲಭ್ಯವಾಗುವ ಸಕಲ ಸಂಪತ್ತಗಳು ಪುರುಷನ ಉತ್ತರೋತ್ತರ ಬದುಕಿಗೆ ನೆಲೆಗಾಣಿಸಬಲ್ಲವು. ಇಂತಹ ಹೆಣ್ಣನ್ನು ಬೇಡವೆನ್ನುವ ಅಣ್ಣಗಳು ಯಾರಾದರೂ ಇದ್ದಾರೆಯೇ ಎಂದು ಉದ್ಘೋಷಿಸುತ್ತಾನೆ ಸರ್ವಜ್ಞ.

ಪಲ್ಲಕ್ಕಿಯನೇರಿದವರೆಲ್ಲಿಂದ ಬಂದಿಹರು
ನೆಲ್ಲಕ್ಕಿಯಂತ ಸುಲಿವಲ್ಲ ಹಿರಿಯರು
ನಲ್ಲಳಿಂದಲ್ಲೆ ಸರ್ವಜ್ಞ ॥

ಚತರಂಗ ಬಲ, ಪರಿವಾರ, ಪತಾಕೆಗಳೊಡನೆ ಪಲ್ಲಕ್ಕಿಯನ್ನು ಹತ್ತಿ ಮೆರವಣಿಗೆಯಲ್ಲಿ ಸಾಗುವ ರಾಜರುಗಳೂ, ಭತ್ತದ ಮೇಲ್ಪದರವನ್ನು ತೆಗೆದಾಗ ಕಾಣಿಸುವ ನೆಲ್ಲಕ್ಕಿಯಂತಹ ಹಲ್ಲನ್ನು ಹೊಂದಿರುವ ನಮ್ಮ ಹಿರಿಯರೆಲ್ಲರೂ ಸ್ತ್ರೀಯ ಗರ್ಭದಿಂದಲೇ ಬಂದವರಾಗಿದ್ದಾರೆ. ಇಡೀ ಜೀವಸಂಕುಲ ಸೃಷ್ಟಿಯಾಗುವುದು ಪ್ರಕೃತಿಮಾತೆಯಿಂದ. ಅದ್ದರಿಂದ ಸ್ತ್ರೀ ಮುಖೇನ ಸೃಷ್ಟಿಯ ರಹಸ್ಯವನ್ನು ಭೇದಿಸಿದ್ದಾನೆ.

ಶಿವನು ತನ್ನ ಸತಿಯ ಮೇಲಿನ ವ್ಯಾಮೋಹದಿಂದ ಅರ್ಧನಾರೀಶ್ವರ ಅವತಾರವೆತ್ತಿ ಅರ್ಧಾಂಗಿಯಾಗಿ ಹೆಣ್ಣನ್ನು ಗುರುತಿಸುವಂತೆ ಮಾಡಿದ್ದಾನೆ. ಇದು ಅರ್ಧನಾರೀಶ್ವರ ಪರಿಕಲ್ಪನೆ ನಾಂದಿಯಾಗಿದೆ. ಸತಿಯ ಮನಸ್ಸನ್ನು ಗೆಲ್ಲಲು ಪುರುಷರು ಏನೆಲ್ಲಾ ಸಾಹಸ ಕ್ರಿಯೆಗಳನ್ನೂ ತ್ಯಾಗಗಳನ್ನೂ ಮಾಡಬೇಕಾದೀತೆಂಬುದು ಸರ್ವ ವಿದಿತ.

ಕಾಮುನಪುರದಿಪ್ಪ ಆ ಮಹಾಕೆರೆಯೊಳು
ಹೇಮಾಹೇಮಿಗಳು ಮುಳುಗಿರಲು ಉಳಿದವರ
ನೇಮುವೇನೆಂದ ಸರ್ವಜ್ಞ ॥

ಕಾಮನ ಪುರದೊಳಗಿರುವ ಒಂದು ಕೆರೆ ಸ್ತ್ರೀ. ಮನ್ಮಥನ ಊರಿಗೆ ಜಲನಿಧಿಯಂತೆಯೇ ಸೌಂದರ್ಯದ ತವನಿಧಿ. ಅಂಗಜನ ಊರ ನಿವಾಸಿಗಳೆಲ್ಲರ ಕಾಮದಾಹವನ್ನು ತಣಿಸುತ್ತಲೇ ಆ ಊರ ಸೌಂದರ್ಯವನ್ನು ಅಧಿಕಗೊಳಿಸಿದ್ದಾಳೆ. ಅಂತಹ ಹೆಣ್ಣಿನ ಚೆಲುವಿಗೆ ಘಟಾಘಟಿಗಳೇ ಮರುಳಾಗಿರುವಾಗ ಉಳಿದ ಮನುಷ್ಯರ ಪಾಡೇನು ಎಂದು ಸರ್ವಜ್ಞನೇ ನಿಬ್ಬೆರಗಾಗಿದ್ದಾನೆ.

ಹಣವು ದೊರೆತರೆ ಲೇಸು ಋಣವು ತೀರಿದರೆ ಲೇಸು
ಗಣಿಕೆಯ ತೊರೆಯೆ ನೆರೆಲೇಸು ಸತಿಯಿರಲಿ
ಗುಣವತಿಯೆ ಲೇಸು ಸರ್ವಜ್ಞ ॥

ಶ್ರಮವಹಸಿ ಹಣವನ್ನು ಗಳಿಸುವಂತೆ, ಯಾವ್ಯಾವುದೋ ಕಾರಣಗಳಿಗೆ ಮಾಡಿದ ಸಾಲವನ್ನು ತೀರಿಸಿ ಋಣ ಮುಕ್ತರಾಗುವಂತೆ, ಮನೆಯಲ್ಲಿ ಹೆಂಡತಿಯಿದ್ದೋ ಅಥವಾ ಅವಳಿಲ್ಲದೆಯೋ ಗಣಿಕೆಯ ಸಹವಾಸವನ್ನು ಮಾಡಿದ್ದರೆ ಅವಳನ್ನು ತ್ಯಜಿಸುವುದು ಎಷ್ಟು ಮುಖ್ಯವೋ ಹಾಗೆಯೇ ಗುಣವಂತಳಾದ ಹೆಂಡತಿಯು ಲಭ್ಯವಾಗುವುದೂ ಅಷ್ಟೇ ಮುಖ್ಯ. ಒಳ್ಳೆಯ ಮನೆ, ಒಳ್ಳೆಯ ಹೆಂಡತಿ, ಒಳ್ಳೆಯ ಮಕ್ಕಳನ್ನು ಪಡೆಯುವುದಕ್ಕೆ ಪುರುಷನಾದವನು ಪುಣ್ಯಮಾಡಿರಲೇಬೇಕೆಂಬುದಕ್ಕೆ ಸಾಕ್ಷಿಪ್ರಜ್ಞೆಯಂತಿದೆ ಮೇಲಿನ ವಚನ.

ಸುಣ್ಣವಿಲ್ಲದ ವೀಳ್ಯ ಬಣ್ಣವಿಲ್ಲದ ಮದುವೆ
ಹೆಣ್ಣಿಲ್ಲದವನ ಸಂಸಾರ ಮಳಲೊಳಗೆ
ಎಣ್ಣೆ ಹೊಯ್ದಂತೆ ಸರ್ವಜ್ಞ ॥

ತಾಂಬೂಲಕ್ಕೆ ಎಲೆ ಅಡಕೆಯಂತೆಯೇ ಅವುಗಳ ರುಚಿ ಒಂದಷ್ಟು ಘಾಟು ಹೆಚ್ಚಿಸಲು ಸುಣ್ಣವೂ ಕೂಡ ಪ್ರಮುಖವಾದುದು. ಅದಿಲ್ಲದೆ ನಾಲಗೆಗೆ ಬಣ್ಣಬರದು. ಮದುವೆಯ ಮನೆಯಲ್ಲಿ ಬಣ್ಣ ಬಣ್ಣದ ವಸ್ತ್ರಗಳು, ರಂಗುರಂಗಿ ರಂಗೋಲಿಗಳು, ಓಕುಳಿಗಳು, ವರ್ಣರಂಜಿತ ಹೂಗಳು ಇದ್ದಾಗ ಮಾತ್ರ ಮದುವೆಯು ಮನಮೋಹಕ ಮತ್ತು ರಂಜನೀಯವಾಗಿರುತ್ತದೆ. ಹೆಣ್ಣಿಲ್ಲದೆ ಗಂಡು ಬದುಕಿದರೂ ಅಪೂರ್ಣವೆನಿಸದಿರದು. ಅದಕ್ಕೆ ಸರ್ವಜ್ಞನು ಹೆಣ್ಣಿಲ್ಲದೆ ಗಂಡಿನ ಜೀವನವು ಮರಳರಾಶಿಯ ಮೇಲೆ ಎಣ್ಣೆಯನ್ನು ಹೊಯ್ದರೆ ಹೇಗೆ ವ್ಯರ್ಥವೋ ಹಾಗೇ ನಿರರ್ಥಕವಾಗುತ್ತದೆ. ಗಂಡು ಹೆಣ್ಣು ಎಂಬ ಎರಡು ಗಾಲಿಗಳು ಸಂಸಾರ ರಥಕ್ಕೆ ಇರಲೇಬೇಕು. ಒಂದನ್ನು ಬಿಟ್ಟು ಮತ್ತೊಂದು ಇರಲಾರದು. ಹಾಗೇನಾದರೂ ಇದ್ದರೆ ಹೆಣ್ಣಿಗಾಗಲಿ, ಗಂಡಿಗಾಗಲಿ ಅಪೂರ್ಣ ಬದುಕಾಗುತ್ತದೆ.

ಕಾಳದೋಲೆಯನಿಟ್ಟು ಬೇಳೆಮಣಿಯನು ಕಟ್ಟಿ
ವೇಳೆಯನು ಅರಿತು ನಡೆವವಳು ದೊರಕುವುದು
ಶೂಲಿಯಾ ಕರುಣ ಸರ್ವಜ್ಞ ॥

ಹೆಣ್ಣು ಎಂದಿಗೂ ಆಭರಣ ಪ್ರಿಯಳೇ, ಆದರೂ ದೈಹಿಕ ಸೌಂದರ್ಯಕ್ಕಿಂತ ಆತ್ಮ ಸೌಂದರ್ಯಕ್ಕೆ ಪ್ರಾಧಾನ್ಯತೆ ನೀಡುವವಳಾಗಿರಬೇಕು. ಅವಳು ನಿರಾಭರಣ ಸುಂದರಿಯಾಗಿದ್ದರೆ ಬಲುಚೆನ್ನ. ಅದಕ್ಕೆ ಬೇಕಾದುದು ಐದೆತನವನ್ನು ಹೆಚ್ಚಿಸುವ ಕರಿಮಣಿಸರ, ಕೈಬಳೆ, ಕಾಲುಂಗುರ, ಹಣೆಗೆ ತಿಲಕ, ಕಿವಿಯೋಲೆಗಳಿಂದ ಅವಳಂದವು ಅಧಿಕವೇ ಹೊರತು ಇಂದಿನ ಮಹಿಳೆಯರು ಏರಿಸಿಕೊಳ್ಳುವ ತೊಲೆಗಟ್ಟಲೆ ಬಂಗಾರದಿಂದಲ್ಲ. ನಿರಾಭರಣದಲ್ಲಿಯೇ ಸಂತೋಷವನ್ನು ಕಾಣಬೇಕು. ತಾನು ಮಾಡಿದ ಅಡುಗೆಯನ್ನು ಪ್ರೀತಿಯಿಂದ ಗಂಡ ಮಕ್ಕಳಿಗೆ ಬಡಿಸಿ ನಂತರ ಮಿಕ್ಕುಳಿದುದನ್ನು ಊಟಮಾಡುವುದೇ ಸತಿಧರ್ಮವೆಂದು ಬಗೆದರೆ ಸಾಂಸಾರಿಕ ಬದುಕು ನೆಮ್ಮದಿಯ ತಾಣವಾಗುತ್ತದೆ. ಅದಿಲ್ಲದಿದ್ದರೆ ಏನಿದ್ದು ಏನು ಪ್ರಯೋಜನ?. ಇಂತಹ ತ್ಯಾಗಶೀಲಳು ದೊರೆಯುವುದೂ ಶಿವನ ಕರುಣೆ ಮತ್ತು ಪೂರ್ವಜನ್ಮದ ಸುಕೃತದ ಫಲವಾಗಿದೆ.

**ಉಪಸಂಹಾರ/ಕೊನೆಯ ಮಾತು**

ಒಟ್ಟಾರೆಯಾಗಿ ಸರ್ವಜ್ಞನ ವಚನಗಳಲ್ಲಿ ಹೆಣ್ಣನ್ನು ಕುರಿತಂತೆ ಹಲವಾರು ವಚನಗಳಿದ್ದು ದಯಾಪರಳೂ, ತ್ಯಾಗಶೀಲೆಯೂ, 'ಗೃಹಿಣಿ ಗೃಹಮುಚ್ಯತೇ' ಎಂಬಂತಿರುವ ಪ್ರೀತಿ ವಿಶ್ವಾಸದಿಂದ ಗಂಡ ಮನೆ ಮಕ್ಕಳು ಬಂಧು ಬಳಗವೆಂದು ಆಲೋಚಿಸುತ್ತಾ ತನ್ನ ಬದುಕಿಗೆ ಕೊಟ್ಟ ಮನೆಗೂ ತಂದ ಮನೆಗೂ ಕಳಂಕ ಬರದಂತೆ ನಡೆದುಕೊಳ್ಳುವುದೇ ಒಂದು ತಪಸ್ಸೆಂದು ಬಗೆದು ನಡೆದರೆ, ಆ ರೀತಿಯಲ್ಲಿ ನಡೆಯಲು ಬೇಕಾಗುವ ಸಂಸ್ಕಾರ, ಕ್ರಮವರಿತ ಶಿಕ್ಷಣ, ಹದಗೆಡಿಸದ ಗೃಹಕೃತ್ಯಗಳು, ಶೀಲಕ್ಕೆ ಸರಿಸಾಟಿಯಾದುದು ಮತ್ತೊಂದು ಗುಣವಿಲ್ಲವೆಂದು ಅರಿತು ನಡೆಯುವ ಹೆಣ್ಣಿನ ಬದುಕೇ ಸೊಗಸಾದುದು ಎಂಬುದನ್ನು ಸರ್ವಜ್ಞ ಲೋಕವಿದಿತವಾಗುವಂತೆ ಮನಮುಟ್ಟುವಂತೆ ಅರ್ಥೈಸಿದ್ದಾನೆ.

**ಗ್ರಂಥಋಣ**

1. ಸರ್ವಜ್ಞನ ವಚನಗಳು ಉತ್ತಂಗಿ ಚನ್ನಪ್ಪ.